# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 684 |
| ಸದಸ್ಯರ ಹೆಸರು | : | ಡಾ|| ಉಮಾಶ್ರೀ (ನಾಮನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ | : | 18.08.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಯಾವ ವರ್ಷದಿಂದ ಉಚಿತ ಶೂ ಭಾಗ್ಯ ನೀಡಲಾಗುತ್ತಿದೆ; ಒಂದು ಮಗುವಿಗೆ ಎಷ್ಟು ಜೊತೆ ಶೂ, ಸಾಕ್ಸ್ ನೀಡಲಾಗುತ್ತಿದೆ; ಈ ಯೋಜನೆಗೆ ಸರ್ಕಾರ ವರ್ಷಕ್ಕೆ ಎಷ್ಟು ಅನುದಾನ ನೀಡುತ್ತಿದೆ; ಯಾವ ಯಾವ ತರಗತಿಗೆ ಎಷ್ಟು ದರದಲ್ಲಿ ಶೂ, ಸಾಕ್ಸ್ ನೀಡಲಾಗುವುದು; | ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ಶೂ-ಸಾಕ್ಸ್ ವಿತರಣೆಯ ಯೋಜನೆಯನ್ನು 2015 ರಿಂದ ಜಾರಿಗೆ ತರಲಾಗಿದೆ. ಸರ್ಕಾರಿ ಶಾಲೆಯ ಪ್ರತಿ ವಿದ್ಯಾರ್ಥಿಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್ ನೀಡಲಾಗುತ್ತಿದೆ. 2025-26ಕ್ಕೆ ರೂ.111.00 ಕೋಟಿ ಒದಗಿಸಲಾಗಿದೆ.<br>1 ರಿಂದ 5ನೇ ತರಗತಿಗೆ ತಲಾ ರೂ.265.00, 6 ರಿಂದ 8ನೇ ತರಗತಿಗೆ ತಲಾ ರೂ.295.00, 9 & 10ನೇ ತರಗತಿಗೆ ತಲಾ ರೂ.325 ದರದಲ್ಲಿ ಶೂ, ಸಾಕ್ಸ್ ನೀಡಲಾಗುವುದು. |
| ಆ) | ಶೂ, ಸಾಕ್ಸ್ ಖರೀದಿ ಹೊಣೆ ಯಾರಿಗೆ ವಹಿಸಲಾಗಿದೆ; ಈ ಯೋಜನೆಯಡಿ ವಿದ್ಯಾರ್ಥಿಗಳಿಗೆ ಗುಣಮಟ್ಟ ಶೂ, ಸಾಕ್ಸ್ ಖರೀದಿಸಬೇಕಾದರೆ ಹೆಚ್ಚುವರಿ ಹಣ ಅಗತ್ಯವಿದ್ದು ಮುಖ್ಯ ಶಿಕ್ಷಕರು ದಾನಿಗಳು, ಸಂಘ ಸಂಸ್ಥೆ ಹಾಗೂ ಪೋಷಕರ ಬಳಿ ಹಣ ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿ ಎಷ್ಟು ಪ್ರಕರಣಗಳು ಗಮನಕ್ಕೆ ಬಂದಿದೆ; | ಶೂ, ಸಾಕ್ಸ್ ಖರೀದಿ ಹೊಣೆಯನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ SDMC ಗೆ ವಹಿಸಲಾಗಿದೆ. ಸದರಿ ಅನುದಾನವನ್ನು ಪ್ರಥಮ ಬಾರಿಗೆ BMS-ತಂತ್ರಾಂಶದ ಮೂಲಕ ರಾಜ್ಯ ಖಜಾನೆಯಿಂದ ನೇರವಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ SDMC ಖಾತೆಗಳಿಗೆ ಬಿಡುಗಡೆಯಾಗುತ್ತಿದೆ. ಶೂ & ಸಾಕ್ಸ್ ಖರೀದಿಗೆ ಮುಖ್ಯ ಶಿಕ್ಷಕರು ದಾನಿಗಳು, ಸಂಘ ಸಂಸ್ಥೆ ಹಾಗೂ ಪೋಷಕರ ಬಳಿ ಹಣ ಕೇಳುತ್ತಿರುವ ಪ್ರಕರಣಗಳು ಸ್ವೀಕೃತವಾಗಿರುವುದಿಲ್ಲ. |
| ಇ) | ಈ ಯೋಜನೆಯಡಿ ಮುಖ್ಯ ಶಿಕ್ಷಕರು ದಾನಿಗಳು, ಸಂಘ ಸಂಸ್ಥೆ ಹಾಗೂ ಪೋಷಕರಿಂದ ಎಷ್ಟು ಹಣ ಇದುವರೆಗೂ ವಸೂಲಿ ಮಾಡಲಾಗಿದೆ? | ಇಂತಹ ಪ್ರಕರಣಗಳು ಸ್ವೀಕೃತವಾಗಿರುವುದಿಲ್ಲ. |

ಇಪಿ 86 ಎಂಪಿಇ 2025

(ಎಸ್.ಮಧುಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು